ADVERTISEMENT



# ಪ್ರತಿ ಪ್ರಯಾಣಿಕನಿಗೆ ಮೆಟ್ರೋಗಿಂತ ಆರು ಪಟ್ಟು ದುಬಾರಿ ಆಗಲಿದೆ ಹೆಬ್ಬಾಳದ ಚಿಕ್ಕ ಸುರಂಗ ರಸ್ತೆ: IISc ವರದಿ

3 Min read | Author : Santosh Naik
Published : Aug 27 2026, 06:42 PM IST




Hebbal Short Tunel Road

Image Credit: X

**ಹೆಬ್ಬಾಳ ಜಂಕ್ಷನ್‌ನಲ್ಲಿ ಉದ್ದೇಶಿತ ಚಿಕ್ಕ ಸುರಂಗ ರಸ್ತೆ ಯೋಜನೆಯು ಸಂಚಾರ ದಟ್ಟಣೆಗೆ ಕೇವಲ ತಾತ್ಕಾಲಿಕ ಪರಿಹಾರ ನೀಡಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (IISc) ಅಧ್ಯಯನ ವರದಿಯು ತಿಳಿಸಿದೆ. ಈ ಯೋಜನೆಯು ಪ್ರತಿ ಪ್ರಯಾಣಿಕನಿಗೆ ಮೆಟ್ರೋಗಿಂತ 6 ಪಟ್ಟು ದುಬಾರಿಯಾಗಿದೆ.**

**ಬೆಂಗಳೂರು (ಆ.27):** ಹೆಬ್ಬಾಳ ಜಂಕ್ಷನ್‌ನಲ್ಲಿ ಎದುರಾಗುತ್ತಿರುವ ಸಂಚಾರ ದಟ್ಟಣೆಗೆ ಮುಕ್ತಿ ನೀಡಲು 1,385 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ 2.2 ಕಿಮೀ ಉದ್ದದ ಶಾರ್ಟ್ ಟನೆಲ್ (ಚಿಕ್ಕ ಸುರಂಗ ರಸ್ತೆ) ಯೋಜನೆಯು ಕೇವಲ ತಾತ್ಕಾಲಿಕ ಪರಿಹಾರವಷ್ಟೇ ನೀಡಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ (IISc) ನಡೆಸಿರುವ ಅಧ್ಯಯನ ವರದಿ ತಿಳಿಸಿದೆ. ಐಐಎಸ್‌ಸಿಯ 'ಸಸ್ಟೈನಬಲ್ ಟ್ರಾನ್ಸ್‌ಪೋರ್ಟೇಶನ್ ಲ್ಯಾಬ್' (IST Lab) ಮುಖ್ಯಸ್ಥ ಪ್ರೊ. ಆಶೀಶ್ ವರ್ಮಾ ಮತ್ತು ಅವರ ತಂಡ ನಡೆಸಿರುವ ಸಂಚಾರ ಪ್ರಭಾವ ಅಧ್ಯಯನದ ಪ್ರಕಾರ, ಈ ಸುರಂಗ ಮಾರ್ಗದಿಂದ ದೊರೆಯುವ ಉಪಶಮನವು 2031 ರ ವೇಳೆಗೆ ಕ್ಷೀಣಿಸಲು ಪ್ರಾರಂಭವಾಗಲಿದ್ದು, 2041 ರ ವೇಳೆಗೆ ಸಂಚಾರ ದಟ್ಟಣೆಯು ಅತ್ಯಂತ ಭೀಕರ ಮಟ್ಟಕ್ಕೆ ತಲುಪಲಿದೆ.

ADVERTISEMENT
GoDaddy Great ideas deserve a great do

## ಮೆಟ್ರೋಗಿಂತ 6 ಪಟ್ಟು ದುಬಾರಿ!: ಹಣಕಾಸಿನ ಸೌಲಭ್ಯದ ಪ್ರಶ್ನೆ

ವರದಿಯು ಈ ಯೋಜನೆಯ ಆರ್ಥಿಕ ಸಮರ್ಥನೀಯತೆಯ ಬಗ್ಗೆಯೂ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಸುರಂಗ ಮಾರ್ಗ ನಿರ್ಮಾಣ ವೆಚ್ಚವನ್ನು ಪ್ರಯಾಣಿಕರ ಸಾಮರ್ಥ್ಯಕ್ಕೆ ಹೋಲಿಸಿ ನೋಡಿದರೆ, ಇದು ಭೂಗತ ಮೆಟ್ರೋ (Underground Metro) ಯೋಜನೆಗಿಂತ ಸುಮಾರು 6 ಪಟ್ಟು ಹೆಚ್ಚು ದುಬಾರಿಯಾಗಲಿದೆ. ಸುರಂಗ ರಸ್ತೆಗೆ ಪ್ರತಿ ಪ್ರಯಾಣಿಕನಿಗೆ ₹5.23 ವೆಚ್ಚವಾದರೆ, ಅದೇ ಮಾರ್ಗದಲ್ಲಿ ಭೂಗತ ಮೆಟ್ರೋ ಯೋಜನೆಗೆ ತಗುಲುವ ವೆಚ್ಚ ಕೇವಲ ₹0.86 ರೂಪಾಯಿ ಮಾತ್ರ. ಗರಿಷ್ಠ ಸಂಚಾರದ ಅವಧಿಯಲ್ಲಿ ಪ್ರತಿ ಗಂಟೆಗೆ, ಪ್ರತಿ ದಿಕ್ಕಿನ ಪ್ರಯಾಣಿಕರ ಸಾಮರ್ಥ್ಯದ ಆಧಾರದ ಮೇಲೆ ಸುರಂಗ ರಸ್ತೆಗೆ ₹13.74 ಲಕ್ಷ ತಗುಲಿದರೆ, ಮೆಟ್ರೋ ಯೋಜನೆಗೆ ₹2.26 ಲಕ್ಷ ವೆಚ್ಚವಾಗುತ್ತದೆ.

## ದಟ್ಟಣೆ ತಗ್ಗಲ್ಲ, ಬದಲಿಗೆ ಹೊಸ ಚೋಕ್ ಪಾಯಿಂಟ್ ಸೃಷ್ಟಿ!

ಹೆಬ್ಬಾಳ ಫ್ಲೈಓವರ್ ಜಂಕ್ಷನ್‌ನಿಂದ ವೆಟರ್ನರಿ ಕಾಲೇಜಿನವರೆಗೆ ನಿರ್ಮಿಸಲು ಉದ್ದೇಶಿಸಿರುವ 2.22 ಕಿಮೀ ಉದ್ದದ ಈ 'ಕಟ್ ಅಂಡ್ ಕವರ್' ಸುರಂಗ ಮಾರ್ಗವು ಕೇವಲ ಸ್ಥಳೀಯ ಮಟ್ಟದಲ್ಲಿ ತಾತ್ಕಾಲಿಕ ಪರಿಹಾರ ನೀಡಲಿದೆಯೇ ಹೊರತು, ಸುರಂಗದ ಪ್ರವೇಶ (Entry) ಮತ್ತು ನಿರ್ಗಮನ (Exit) ದ್ವಾರಗಳಲ್ಲಿ ಸಂಚಾರ ದಟ್ಟಣೆಯನ್ನು ಮತ್ತಷ್ಟು ಹೆಚ್ಚಿಸಲಿದೆ. ಸಂಚಾರ ದಟ್ಟಣೆಯು ವೆಟರ್ನರಿ ಕಾಲೇಜು ಮತ್ತು ಎಸ್ಟೀಮ್ ಮಾಲ್ ಬಳಿಯ ಹೊಸ ಚೋಕ್ ಪಾಯಿಂಟ್‌ಗಳಿಗೆ ಸ್ಥಳಾಂತರಗೊಳ್ಳಲಿದೆ.